| | | |
|---|---|---|
| ಅಧೀಕ್ಷಕರು | 01 | |
| ಪ್ರಥಮ ದರ್ಜೆ ಸಹಾಯಕರು | 01 | |
| ಬೆರಳಚ್ಚುಗಾರರು | 01 | |
| ಗ್ರಂಥಾಲಯ ಸಹಾಯಕರು | 03 | |
| ಅಟೆಂಡರ್ | 03 | ಮತ್ತು |
| ಪರಿಚಾರಕರು | 03 | |

(ಇ)

| | | |
|---|---|---|
| ಉಪನ್ಯಾಸಕರು; | 12 | |
| ದೈಹಿಕ ಶಿಕ್ಷಣ ಬೋಧಕರು | 01 | |
| ಗ್ರಂಥಪಾಲಕರು | 01 | |
| ಬೆರಳಚ್ಚುಗಾರರು | 01 | |
| ಗ್ರಂಥಾಲಯ ಸಹಾಯಕರು | 03 | |
| ಅಟೆಂಡರ್ | 03 | |
| ಪರಿಚಾರಕರು | 03 | |

(ಈ) ಹೌದು

(ಉ) ಹೌದು

(ಊ) ಸದರಿ ಕಾಲೇಜಿಗೆ 5.00 ಎಕರೆ ವಿಸ್ತೀರ್ಣದ ಭೂಮಿಯನ್ನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿ ಕಾರವಾರ ಇವರನ್ನು ಕೋರಲಾಗಿದ್ದು, ಜಿಲ್ಲಾಧಿಕಾರಿಗಳಿಂದ ನಿವೇಶನ ಮಂಜೂರಾದ ನಂತರ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

**55 (153) ಶ್ರೀ ನಾಯ್ಕ ಜೆ.ಡಿ. (ಭಟ್ಕಳ)** :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಹಿಂದೆ ಮಂಜೂರು ಮಾಡಿದ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳು ಎಷ್ಟು;

(ಆ) ಈ ಪ್ರೌಢಶಾಲೆಗೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಮಂಜೂರಾದ ಶಿಕ್ಷಕರ ಹಾಗೂ ಸಿಬ್ಬಂದಿ ಎಷ್ಟು;

(ಇ) ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ;

(ಈ) ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಸಿಬ್ಬಂದಿ ಕೊರತೆಯಾದಲ್ಲಿ ಮಕ್ಕಳ ಶಿಕ್ಷಣದ ಭವಿಷ್ಯಕ್ಕೆ ತೊಂದರೆ ಆಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಈ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಹೊಸ ಕಟ್ಟಡ ನಿರ್ಮಿಸಲು ಸರ್ಕಾರದ ಕ್ರಮ ಏನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)** :–

(ಅ) (1) ಸರ್ಕಾರಿ ಪ್ರೌಢಶಾಲೆಗಳು 06

(2) ಪದವಿ ಪೂರ್ವ ಕಾಲೇಜುಗಳು 04

(ಆ)

| | ಬೋಧಕ ಹುದ್ದೆಗಳು | ಬೋಧಕೇತರ ಹುದ್ದೆಗಳು |
|---|---|---|
| ಪ್ರೌಢಶಾಲೆಗಳಿಗೆ ಮಂಜೂರಾದ ಹುದ್ದೆಗಳು | 42 | 10 |
| ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರಾದ ಹುದ್ದೆಗಳು | 30 | 02 |

(ಇ)

| | ಬೋಧಕ ಹುದ್ದೆಗಳು | ಬೋಧಕೇತರ ಹುದ್ದೆಗಳು |
|---|---|---|
| ಪ್ರೌಢಶಾಲೆಗಳಿಗೆ ಭರ್ತಿ ಮಾಡಲಾದ | 33 | 05 |
| ಪದವಿ ಪೂರ್ವ ಕಾಲೇಜುಗಳಿಗೆ ಭರ್ತಿ ಮಾಡಲಾದ ಹುದ್ದೆಗಳು | 23 | – |

(ಈ) ಬಂದಿದೆ

(ಉ)ಬಂದಿದೆ

(ಊ) ಈ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿಗೆ ಹೊಸ ಕಟ್ಟಡ ನಿರ್ಮಿಸಲು ಆರ್.ಐ.ಡಿ.ಎಫ್.–12,13,14ರ ಯೋಜನೆಯಡಿಯಲ್ಲಿ ಕೊಠಡಿಗಳ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

**56 (46) ಶ್ರೀ ರೋಷನ್ ಬೇಗ್ ಆರ್. (ಶಿವಾಜಿನಗರ)** :– ಮಾನ್ಯ ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರಕ್ಕೆ ಪ್ರತ್ಯೇಕವಾಗಿ ವಿದ್ಯುತ್ ಸರಬರಾಜು (Power Generation) ಘಟಕ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;

(ಆ) ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು, ಪೂರ್ಣ ಮಾಹಿತಿಯನ್ನು ಒದಗಿಸುವುದು?

**ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು)** :–

(ಅ) ಯಾವುದೇ ವಿದ್ಯುತ್ ಯೋಜನೆ ಪ್ರತ್ಯೇಕವಾಗಿ ಒಂದು ಸ್ಥಳಕ್ಕೆ ಸೀಮಿತವಾಗಿ ನಿಯೋಜಿಸಿರುವುದಿಲ್ಲ. ಎಲ್ಲಾ ಯೋಜನೆಗಳು ಕರ್ನಾಟಕ ವಿದ್ಯುತ್ ಜಾಲಕ್ಕೆ ಸೇರ್ಪಡಿಸಲಾಗುತ್ತದೆ.

(ಆ) ಉದ್ಭವಿಸುವುದಿಲ್ಲ

**58 (100) ಶ್ರೀ ಶಿವಶಂಕರ ರೆಡ್ಡಿ.ಎನ್.ಹೆಚ್. (ಗೌರಿಬಿದನೂರು)** :– ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಗ್ರಾಮೀಣ ಭಾಗದಲ್ಲಿ ಜೀತ ಪದ್ಧತಿಯಲ್ಲಿರುವ ರೈತಾಪಿ ಜನರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

(ಆ) ರಾಜ್ಯದಲ್ಲಿ ಇದೂವರೆವಿಗೂ ಜೀತದಾಳು ಪದ್ಧತಿಯಿಂದ ಮುಕ್ತಿಗೊಳಿಸಿ ಪರಿಹಾರ ನೀಡಿರುವ ಸಂಖ್ಯೆ ಎಷ್ಟು ;

(ಇ) ರಾಜ್ಯದಲ್ಲಿ ಇದೂವರೆವಿಗೂ ಜೀತದಾಳುಗಳಿಗೆ ಪುನರ್ ವಸತಿ ಕಲ್ಪಿಸಲಾಗಿದೆಯೇ (ಮಾಹಿತಿ ನೀಡುವುದು);